-145-

# ಕರ್ನಾಟಕ ಲೋಕಾಯುಕ್ತ

ನಂ.ಕಂಪ್ಲೆಂಟ್/ಉಪಲೋಕ್/ಬಿಜಿಎಂ-2946/2013/ಪಿಪಿ

ಬಹುಮಹಡಿಗಳ ಕಟ್ಟಡ,
ಡಾ:ಅಂಬೇಡ್ಕರ್ ವೀಧಿ,
ಬೆಂಗಳೂರು.
ದಿನಾಂಕ : 27/01/2017

## ಕರ್ನಾಟಕ ಲೋಕಾಯುಕ್ತ ಕಾಯ್ದೆ 1984 ರ ಕಲಂ 12(3) ರನ್ವಯ ವರದಿ

ವಿಷಯ: ಶ್ರೀ ಪ್ರೀತಮ ನಸಲಾಪುರೆ, ತಹಶೀಲ್ದಾರ್, ಬೆಳಗಾವಿ ತಾಲ್ಲೂಕು, ಬೆಳಗಾವಿ ಇವರು ಸರ್ಕಾರಿ/ಸಾರ್ವಜನಿಕ ನೌಕರರಾಗಿ ದುರ್ನಡತೆ ಎಸಗಿರುವ ಕುರಿತು ವರದಿ.

*-*-*

ಪ್ರಕರಣದ ದೂರುದಾರರಾದ ಶ್ರೀಮತಿ ಮೀನಾಕ್ಷಿ ವಸಂತ ರಾವ್ ಕುಲ್ಕರ್ಣಿ ಇವರು ಈ ಸಂಸ್ಥೆಗೆ ದೂರೊಂದನ್ನು ಸಲ್ಲಿಸಿ, ತಾನು ಬೆಳಗಾವಿಯ ವಿವೇಕಾನಂದ ರಸ್ತೆ ಬಳಿಯಿರುವ ಅನಗೋಲದ ಸರ್ವೆ ನಂ.15/2ರ ಮತ್ತು ಅನಗೋಲದರಸ್ತೆ ಬಳಿ ಇರುವ ಸರ್ವೆ ನಂ.31/4/3ರ ಜಮೀನಿಗೆ ಮಾಲೀಕರಾಗಿದ್ದು, ಸದರಿ ಜಾಗಕ್ಕೆ ಸಂಬಂಧಿಸಿದಂತೆ ನ್ಯಾಯಾಲಯದಲ್ಲಿ ಆದೇಶ ಆಗಿದ್ದು, ಸದರಿ ಆದೇಶದಂತೆ ಮ್ಯೂಟೇಷನ್ ಅನ್ನು ತನ್ನ ಹೆಸರಿಗೆ ಖಾತೆ ಬದಲಾವಣೆ ಮಾಡಿಕೊಡಬೇಕೆಂದು ಕೋರಿ ಬೆಳಗಾವಿಯ ತಹಶೀಲ್ದಾರ್‌ರವರಿಗೆ ಅರ್ಜಿ ಸಲ್ಲಿಸಿದ್ದರೂ, ತಹಶೀಲ್ದಾರ್‌ರವರು ಯಾವುದೇ ಕ್ರಮ ಜರುಗಿಸಿರುವುದಿಲ್ಲ. ಈ ಬಗ್ಗೆ ಬೆಳಗಾವಿಯ ಅಸಿಸ್ಟೆಂಟ್ ಕಮೀಷನರ್ ರವರಿಗೆ ಅರ್ಜಿಯನ್ನು ಸಲ್ಲಿಸಿದ್ದು, ಸದರಿಯರವರು ತಹಶೀಲ್ದಾರ್ ಬೆಳಗಾವಿ ಇವರಿಗೆ ಈ ಬಗ್ಗೆ ಸೂಕ್ತ ಕ್ರಮ ಜರುಗಿಸಲು ನಿರ್ದೇಶನ ನೀಡಿರುತ್ತಾರೆ. ಆದರೂ ಸಹ ಎದುರುದಾರರು ಯಾವುದೇ ಕ್ರಮ ಜರುಗಿಸಿರುವುದಿಲ್ಲ. ಆದ್ದರಿಂದ, ಎದುರುದಾರರ ವಿರುದ್ಧ ಕ್ರಮ ಜರುಗಿಸಿ ತಮ್ಮ ತೊಂದರೆಯನ್ನು ನಿವಾರಿಸಿಕೊಡಬೇಕೆಂದು ಕೋರಿರುತ್ತಾರೆ. ಸದರಿ ದೂರಿನ ಆಧಾರದ ಮೇಲೆ ಕರ್ನಾಟಕ ಲೋಕಾಯುಕ್ತ ಕಾಯ್ದೆ 1984ರ ಕಲಂ 9 ರಡಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ತನಿಖೆಗೆ ಆದೇಶಿಸಲಾಗಿರುತ್ತದೆ.

2. ಸದರಿ ದೂರಿನ ಆಧಾರದ ಮೇಲೆ ಎದುರುದಾರರ ಆಕ್ಷೇಪಣೆಯನ್ನು ಹಾಗೂ ಸಂಬಂಧಪಟ್ಟ ಅಧಿಕಾರಿಯಿಂದ ಮಾಹಿತಿಯನ್ನು ಕರೆಯಲಾಗಿದ್ದು, ಸದರಿ ಪ್ರಧಾನ ಕಾರ್ಯದರ್ಶಿ, ಕಂದಾಯ ಇಲಾಖೆಯಿಂದ ಇವರಿಂದ ಯಾವುದೇ ಮಾಹಿತಿ ಬಂದಿರುವುದಿಲ್ಲ. ಆದರೆ, 1ನೇ ಎದುರುದಾರರು ತಮ್ಮ ಆಕ್ಷೇಪಣೆಯನ್ನು ಸಲ್ಲಿಸಿ, ಸದರಿ ಆಕ್ಷೇಪಣೆಯಲ್ಲಿ ಸಂಬಂಧಪಟ್ಟ ಕಂದಾಯ ನಿರೀಕ್ಷಕರು ಬೆಳಗಾವಿ ಅನಗೋಲ ಗ್ರಾಮದ ಸರ್ವೆ ನಂ.31/4/3ರ ಜಮೀನಿಗೆ ಸಂಬಂಧಿಸಿದಂತೆ ಪಾರ್ವತಿಬಾಯಿ

ಶಂಕರ್‌ರಾವ್ ಅರ್ಜುನ ವಾಡ್ಕರ್ ರವರ ಹೆಸರನ್ನು ತೆಗೆದುಹಾಕಿ ದೂರುದಾರರ ಹೆಸರನ್ನು ನಮೂದಿಸಲಾಗಿರುತ್ತದೆ. ಆದರೆ, ಸರ್ವೇ ನಂ.15/2ಕ್ಕೆ ಸಂಬಂಧಿಸಿದಂತೆ ಪ್ರಕರಣವು ವಿಲೇಗೆ ಬಾಕಿ ಇರುತ್ತದೆ. ಸದರಿ ಸರ್ವೆ ನಂಬರ್‌ನ ಜಾಗಕ್ಕೆ ಸಂಬಂಧಿಸಿದಂತೆ ಮ್ಯೂಟೇಷನ್ ಎಂಟ್ರಿ ಮಾಡಲು ತಕರಾರು ಇದ್ದ ಕಾರಣ, ಸದರಿ ತಕರಾರಿನ ಬಗ್ಗೆ ವಿಚಾರಣೆ ನಡೆಸಿ ಕ್ರಮಜರುಗಿಸಲಾಗುವುದು ಎಂದು ತಿಳಿಸಿರುತ್ತಾರೆ.

3. ಸದರಿ ಎದುರುದಾರರ ಆಕ್ಷೇಪಣೆ ಮೇರೆಗೆ ದೂರುದಾರರ ಪ್ರತ್ಯುತ್ತರವನ್ನು ಕರೆಯಲಾಗಿದ್ದು, ದೂರುದಾರರು ತಮ್ಮ ಪ್ರತ್ಯುತ್ತರವನ್ನು ಸಲ್ಲಿಸಿದ್ದು, ಅದರಲ್ಲಿ, ಎದುರುದಾರರು ಏತಕ್ಕಾಗಿ ತಮ್ಮ ಹೆಸರನ್ನು ಅನಗೋಲದ ಸರ್ವೇ ನಂ.15/2ಕ್ಕೆ ಸಂಬಂಧಿಸಿದಂತೆ ಮ್ಯೂಟೇಷನ್ ಮಾಡಿರುವುದಿಲ್ಲವೆಂಬ ಬಗ್ಗೆ ಕಾರಣಗಳನ್ನು ತಿಳಿಸಿರುವುದಿಲ್ಲ. 1ನೇ ಎದುರುದಾರರು ಅಸಿಸ್ಟೆಂಟ್ ಕಮೀಷನರ್ ರವರಿಂದ ನಿರ್ದೇಶನ ಬಂದ ನಂತರ ದೂರುದಾರರ ಹೆಸರನ್ನು ಸದರಿ ಸರ್ವೆ ನಂ.15/2ಕ್ಕೆ ಸಂಬಂಧಿಸಿದಂತೆ ಮ್ಯೂಟೇಷನ್ ಮಾಡಲು ಕ್ರಮ ಜರುಗಿಸಬೇಕಾಗಿತ್ತು ಎಂದು ತಿಳಿಸಿರುತ್ತಾರೆ.

4. ದೂರಿನಂಶಗಳನ್ನು, ಎದುರುದಾರರ ಆಕ್ಷೇಪಣೆಯನ್ನು ಹಾಗೂ ಪ್ರಕರಣದಲ್ಲಿ ಹಾಜರುಪಡಿಸಿರುವ ದಾಖಲೆಗಳನ್ನು ಪರಿಶೀಲಿಸಿದಲ್ಲಿ, ಅನಗೋಲ ಗ್ರಾಮದ ಸರ್ವೇ ನಂ.31/4/3 ರ ಮಾಲೀಕರಾದ ಪಾರ್ವತಿ ಬಾಯಿ ಶಂಕರ್‌ರಾವ್ ಅರ್ಜುನ್ ವಾಡ್ಕರ್ ಇವರು ದಿ:02/07/2007 ರಂದು ಮೃತರಾಗಿದ್ದ ಕಾರಣ, ಅವರ ಹೆಸರನ್ನು ಕಡಿಮೆ ಮಾಡಿ ಅರ್ಜಿದಾರರ ಹೆಸರನ್ನು ದಾಖಲು ಮಾಡಿ ಕಂದಾಯ ನಿರೀಕ್ಷಕರು, ಬೆಳಗಾವಿ ಇವರು ಸದರಿ ವಹಿವಾಟಿಗೆ ದಿ:02/05/2012 ರಂದು ಅನುಮೋದನೆ ನೀಡಿರುತ್ತಾರೆ. ಆದರೆ, ಅನಗೋಲ ಗ್ರಾಮದ ಸರ್ವೇ ನಂ.15/2 ರಲ್ಲಿ ಎಂ.ವಿ.ಜಿ ಕೇಸ್ ಬಾಕಿ ಇದ್ದ ಕಾರಣ ಸದರಿ ರಿಜಿಸ್ಟರ್ ಸರ್ವೇ ನಂ.15/2 ಅನ್ನು ಬಿಟ್ಟು ಸರ್ವೇ ನಂ.31/4/3 ರ ಬಗ್ಗೆ ಅರ್ಜಿದಾರರ ಮನವಿಯ ಪ್ರಕಾರ ಕ್ರಮ ಕೈಗೊಳ್ಳಲಾಗಿರುತ್ತದೆ. ಆದ್ದರಿಂದ, ಈ ಬಗ್ಗೆ ವಿವರವಾದ ವರದಿಯನ್ನು ನೀಡಲು ಭೂಮಿ ಶಿರೇಸ್ತೇದಾರ್ ಇವರಿಗೆ ತಮ್ಮ ಕಾರ್ಯಾಲಯದ ಪತ್ರ ಸಮಸಂಖ್ಯೆ: 17/01/2014ರ ಮುಖೇನ ಸೂಚಿಸಲಾಗಿತ್ತು. ಸದರಿ ಗ್ರಾಮದ ಸರ್ವೇ ನಂ.15/2 ರಲ್ಲಿ ವಹಿವಾಟಿನ ಪ್ರಕ್ರಿಯೆ ಚಾಲ್ತಿಯಲ್ಲಿದ್ದ ಕಾರಣ, ಅರ್ಜಿದಾರರ ಮನವಿಯನ್ನು ಭೂಮಿ ತಂತ್ರಾಂಶದಲ್ಲಿ ಅಳವಡಿಸುವಾಗ ಮ್ಯೂಟೇಷನ್ ಎಂಟ್ರಿ ಪೆಂಡಿಂಗ್ ಎಂದು ಆಕ್ಷೇಪಣೆ ಇದ್ದ ಕಾರಣ, ಸದರಿ ಗ್ರಾಮದ ರಿಜಿಸ್ಟರ್ ಸರ್ವೆ ನಂ.15/2ರ ಕುರಿತು ಅರ್ಜಿಯನ್ನು ಅಳವಡಿಸಲು ಸಾಧ್ಯವಾಗಿರುವುದಿಲ್ಲ ಎಂದು ಭೂಮಿ ಶಿರೇಸ್ತೇದಾರ್ ರವರು ತಮ್ಮ ವರದಿಯನ್ನು ತಹಶೀಲ್ದಾರ್ ರವರ ಕಾರ್ಯಾಲಯಕ್ಕೆ ನೀಡಿರುತ್ತಾರೆ. ಆದರೆ, ಪ್ರಸ್ತುತ ಸರ್ವೇ ನಂ.15/2 ರಲ್ಲಿ ಮ್ಯೂಟೇಷನ್ ಎಂಟ್ರಿ ಪೆಂಡಿಂಗ್ ಎಂದು ಇದ್ದ ಆಕ್ಷೇಪಣೆಯನ್ನು ಸರಿಪಡಿಸಲಾಗಿದ್ದು, ಆದ್ದರಿಂದ, ಅರ್ಜಿದಾರರ ಮನವಿಯ ಕುರಿತು ಕಾನೂನಿನ ಪ್ರಕಾರ ಕ್ರಮ

-143-

ಕೈಗೊಂಡು, ಈ ಕುರಿತು ಅರ್ಜಿದಾರರಿಗೆ ಹಿಂಬರಹವನ್ನು ನೀಡಲಾಗುವುದು ಎಂದು ತಿಳಿಸಿರುವುದು ತಹಶೀಲ್ದಾರ್ ರವರ ದಿ:22/01/2014 ರ ಪತ್ರದಿಂದ ಕಂಡು ಬರುತ್ತದೆ. ಸದರಿ ಪತ್ರವನ್ನು ಹಾಜರುಪಡಿಸಲಾಗಿದೆ. ದಿ:16/05/2013 ರಂದು ಉಪವಿಭಾಗಾಧಿಕಾರಿ, ಬೆಳಗಾವಿ ಇವರು ತಹಶೀಲ್ದಾರ್ ರವರಿಗೆ ಪತ್ರವನ್ನು ಬರೆದು, ಅರ್ಜಿದಾರರು ಮನವಿಯಲ್ಲಿ ಕೋರಿರುವಂತೆ ಬೆಳಗಾವಿ ತಾಲ್ಲೂಕಿನ ಸರ್ವೇನಂ.15/2 ಕ್ಕೆ ಹಕ್ಕು ದಾಖಲು ಅಮಲ ಮಾಡುವ ಬಗ್ಗೆ ಸೂಕ್ತ ಕ್ರಮ ಜರುಗಿಸಲು ಸೂಚಿಸಿ ಕೈಗೊಂಡ ಕ್ರಮದ ಬಗ್ಗೆ ತಮ್ಮ ಕಛೇರಿಗೆ ವರದಿ ಸಲ್ಲಿಸಲು ನಿರ್ದೇಶಿಸಿರುತ್ತಾರೆ. ಆದರೆ, ಈ ಬಗ್ಗೆ ದೂರುದಾರರು ಕರ್ನಾಟಕ ಲೋಕಾಯುಕ್ತ ಸಂಸ್ಥೆಗೆ ದೂರನ್ನು ನೀಡುವವರೆಗೂ 1ನೇ ಎದುರುದಾರರು ಯಾವುದೇ ಕ್ರಮ ಜರುಗಿಸದೇ ಇರುವುದು ಕಂಡು ಬರುತ್ತದೆ.

5. ದೂರುದಾರರು 1ನೇ ಎದುರುದಾರರಿಗೆ ಮ್ಯೂಟೇಷನ್ ಕೋರಿ ದಿ:14/03/2012 ರಂದು ಅರ್ಜಿ ಸಲ್ಲಿಸಿರುತ್ತಾರೆ. ಸದರಿಯವರು ನ್ಯಾಯಾಲಯದಿಂದ ನೀಡಲಾದ probate certificate (ಆದೇಶ) ಆಧಾರದ ಮೇಲೆ ದೂರುದಾರರು ತಮ್ಮ ಹೆಸರಿಗೆ ಮ್ಯೂಟೇಷನ್ ಕೋರಿರುವುದು ಕಂಡು ಬರುತ್ತದೆ. ಈ ಸಂಬಂಧ ತಹಶೀಲ್ದಾರ್ ರವರಿಗೆ ನೀಡಲಾದ ಅರ್ಜಿಯ ಪ್ರತಿಯನ್ನು ಹಾಜರುಪಡಿಸಲಾಗಿದೆ. ಉಪವಿಭಾಗಾಧಿಕಾರಿಗಳು ತಹಶೀಲ್ದಾರ್ ರವರಿಗೆ ಅನಗೋಲದ ಗ್ರಾಮ ಸರ್ವೇ ನಂ.15/2ರ ಬಗ್ಗೆ ಸೂಕ್ತ ಕ್ರಮ ಜರುಗಿಸಲು ನಿರ್ದೇಶನ ನೀಡಿರುವ ಬಗೆಗಿನ ಪತ್ರದ ಪ್ರತಿಯನ್ನು ಹಾಜರುಪಡಿಸಲಾಗಿದೆ. ದೂರುದಾರರ ಹೆಸರಿಗೆ ಮಾನ್ಯ ಜಿಲ್ಲಾ ನ್ಯಾಯಾಧೀಶರು Indian Succession Act ಅಡಿಯಲ್ಲಿ ಸಲ್ಲಿಸಿದ್ದ ಅರ್ಜಿಯ ಮೇಲೆ ದಿ:12/09/2011 ರಂದು ಆದೇಶ ಹೊರಡಿಸಿದ್ದು, ಅದರಂತೆ, ಅನಗೋಲ ಗ್ರಾಮದ ಸರ್ವೇ ನಂ.15/2 ಕ್ಕೆ ಸಂಬಂಧಿಸಿದಂತೆ ಪ್ರೊಬೇಟ್ ಪ್ರಮಾಣ ಪತ್ರವನ್ನು ದೂರುದಾರರ ಹೆಸರಲ್ಲಿ ನೀಡಲು ಆದೇಶಿಸಿರುವುದು ಸದರಿ ಆದೇಶದ ಪ್ರತಿಯಿಂದ ಕಂಡು ಬರುತ್ತದೆ. ಸದರಿ ಆದೇಶದ ಪ್ರತಿಯನ್ನು ಹಾಜರುಪಡಿಸಲಾಗಿದೆ. ಈ ಎಲ್ಲ ಅಂಶಗಳನ್ನು ಪರಿಶೀಲಿಸಿದಲ್ಲಿ 1ನೇ ಎದುರುದಾರರು ಸೂಕ್ತ ಕ್ರಮ ಜರುಗಿಸದೇ ದೂರುದಾರರ ಹೆಸರನ್ನು ಅನಗೋಲ ಗ್ರಾಮದ ಸರ್ವೇನಂ.15/2ಕ್ಕೆ ಸಂಬಂಧಿಸಿದಂತೆ ಮ್ಯೂಟೇಷನ್ ಮಾಡಿಸುವಲ್ಲಿ ಮಾನ್ಯ ಉಪವಿಭಾಗಾಧಿಕಾರಿ, ಬೆಳಗಾವಿಯವರ ನಿರ್ದೇನವಿದ್ದರೂ ಸಹ ಕ್ರಮ ಜರುಗಿಸದೇ ವಿಳಂಭ ಮಾಡಿ ದೂರುದಾರರ ತೊಂದರೆಗೆ ಕಾರಣರಾಗಿರುವುದು ಸ್ಪಷ್ಟ ಪಡುತ್ತದೆ. 2ನೇ ಎದುರುದಾರರಾದ ಅಸ್ಸಿಸ್ಟೆಂಟ್ ಕಮೀಷನರ್ (ಉಪವಿಭಾಗಾಧಿಕಾರಿ) ಯವರಿಂದ ಕರ್ತವ್ಯಲೋಪ ಉಂಟಾಗಿರುವ ಬಗ್ಗೆ ಯಾವುದೇ ಸಾಕ್ಷ್ಯಾಧಾರಗಳು ಮೂಡಿಬಂದಿರುವುದಿಲ್ಲ.

6. ಮೇಲೆ ಚರ್ಚಿಸಿದ ಕಾರಣಗಳ ಹಿನ್ನೆಲೆಯಲ್ಲಿ, ಕರ್ನಾಟಕ ನಾಗರೀಕ ಸೇವೆ (ನಡತೆ) ನಿಯಮಗಳು 1966ರ ನಿಯಮ 3(1)(ii) ಮತ್ತು (iii) ರನ್ವಯ ಎದುರುದಾರರು ಶಿಸ್ತು ಕ್ರಮಕ್ಕೆ ಬಾಧ್ಯರಾಗಿರುತ್ತಾರೆಂದು ಕಂಡುಬಂದಿದ್ದರಿಂದ, **1ನೇ ಎದುರುದಾರರಾದ ಶ್ರೀ ಪ್ರೀತಮ ನಸಲಾಪುರೆ,**

**ತಹಶೀಲ್ದಾರ್, ಬೆಳಗಾವಿ ತಾಲ್ಲೂಕು, ಬೆಳಗಾವಿ** ಇವರ ವಿರುದ್ಧ ಶಿಸ್ತು ನಡವಳಿಕೆ ಕ್ರಮ ಜರುಗಿಸಲು ಮತ್ತು ಹಾಗೆಯೇ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿರ್ಬಂಧ ಮತ್ತು ಮೇಲ್ಮನವಿ) ನಿಯಮಗಳು, 1957ರ ನಿಯಮ 14–ಎ ರ ಅಡಿಯಲ್ಲಿ ಇಲಾಖಾ ವಿಚಾರಣೆ ನಡೆಸಲು ಈ ಪ್ರಾಧಿಕಾರಕ್ಕೆ ಒಪ್ಪಿಸುವಂತೆ, ಕರ್ನಾಟಕ ಲೋಕಾಯುಕ್ತ ಕಾಯ್ದೆ ಕಲಂ 12(3) ರನ್ವಯ ಪ್ರದತ್ತವಾದ ಅಧಿಕಾರದಡಿ, ಶಿಸ್ತು ಪ್ರಾಧಿಕಾರಕ್ಕೆ ಶಿಫಾರಸ್ಸು ಮಾಡಿದೆ.

7. ಮುಂದುವರೆದು, ಕರ್ನಾಟಕ ಲೋಕಾಯುಕ್ತ ಕಾಯ್ದೆಯ ಕಲಂ 12(4) ರ ಪ್ರಕಾರ, ಶಿಸ್ತು ಪ್ರಾಧಿಕಾರವು ವರದಿಯನುಸಾರ ಕೈಗೊಂಡ ಕ್ರಮದ ಬಗ್ಗೆ ಅಥವಾ ಕೈಗೊಳ್ಳಬಹುದಾದ ಕ್ರಮದ ಬಗ್ಗೆ, ಈ ವರದಿ ತಲುಪಿದ ದಿನಾಂಕದಿಂದ **ಮೂರು ತಿಂಗಳೊಳಗಾಗಿ** ಈ ಪ್ರಾಧಿಕಾರಕ್ಕೆ ವರದಿ ಮಾಡಲು ಸೂಚಿಸಲಾಗಿದೆ.

ಸಂಬಂಧಪಟ್ಟ ದಾಖಲೆಗಳನ್ನು ಲಗತ್ತಿಸಿದೆ.

N. Ananda
(ನ್ಯಾಯಮೂರ್ತಿ ಎನ್.ಆನಂದ)
ಉಪಲೋಕಾಯುಕ್ತರು, 27/1
ಕರ್ನಾಟಕ ರಾಜ್ಯ,
ಬೆಂಗಳೂರು. 27/1/17